ಪ್ರೊ. ನೀಲಕಂಠ.
ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳು

# ಎನ್.ಎಸ್.ಎಸ್. ವಾರ್ಷಿಕ ವರದಿ 2018-19

14.07.2018ರಂದು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ನಮ್ಮ ಕಾಲೇಜಿನ ರಾ.ಸೇ.ಯೋ. ಘಟಕದ ಸಲಹಾ ಸಮಿತಿಯನ್ನು ರಚಿಸಲಾಯಿತು. ಸಲಹಾ ಸಮಿತಿಯ ಸದಸ್ಯರ ಪಟ್ಟಿ ಈ ಕೆಳಕಂಡಂತಿದೆ.

| | | |
|---|---|---|
| 1. | ಡಾ. ರಾಮಲಿಂಗಯ್ಯ | ಅಧ್ಯಕ್ಷರು |
| 2. | ಪ್ರೊ.ನೀಲಕಂಠ | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಎಸ್.ಎಚ್.ಮರಿಯಯ್ಯ | ಸದಸ್ಯ ಕಾರ್ಯದರ್ಶಿಗಳು |
| 4. | ಪ್ರೊ. ಎಸ್.ಕೆ.ವೀರೇಶ್ | ಸದಸ್ಯರು |
| 5. | ಪ್ರೊ.ಸಿ. ಚಂದ್ರಶೇಖರ್ | ಸದಸ್ಯರು |
| 6. | ಪ್ರೊ. ಎಚ್.ಸಿ. ಸುದರ್ಶನ್ | ಸದಸ್ಯರು |
| 7. | ಪ್ರೊ.ವಿನುತಾ | ಸದಸ್ಯರು |
| 8. | ನಾಗಮಣಿ ಎಂ.ಕೆ. | ಪ್ರತಿನಿಧಿ |
| 9. | ಸಂತೋಷ್ ಕುಮಾರ್ ಕೆ.ಎನ್. | ಪ್ರತಿನಿಧಿ |
| 10. | ಸಚಿನ್ ನೋಹನ್ | ಪ್ರತಿನಿಧಿ |
| 11. | ಕೆ.ಎಂ.ಕೃಷ್ಣೇಗೌಡ | ಸಂಪನ್ಮೂಲ ವ್ಯಕ್ತಿ |
| 12. | ಶ್ರೀಮತಿ ಅನುಪಮ | ಸಂಪನ್ಮೂಲ ವ್ಯಕ್ತಿ |

ದಿನಾಂಕ: 14.07.2018 ರಂದು ಪಿ.ಇ.ಎಸ್. ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ಸಲಹಾ ಸಮಿತಿಯ ರಚನೆಯನ್ನು ಸ್ವಯಂ ಸೇವಕರು ಮತ್ತು ಪ್ರೊ ಎಸ್.ಹೆಚ್.ಮರಿಯಯ್ಯ ಹಾಗೂ ಪ್ರೊ: ನೀಲಕಂಠ ಕಾರ್ಯಕ್ರಮಾಧಿಕಾರಿಗಳು ಇವರ ಸಮಿತಿಯಲ್ಲಿ ಸಭೆ ನಡೆಸಲಾಯಿತು. 21.7.2018 ರಂದು ಹಿರಿಯ ಸ್ವಯಂ ಸೇವಕರು ಮತ್ತು ಪ್ರೊ ಎಸ್.ಎಚ್. ಮರಿಯಯ್ಯ ಮತ್ತು ಪ್ರೊ ನೀಲಕಂಠ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳ ನೋಂದಣಿಗಳು ಮತ್ತು ಸಭೆಯನ್ನು ನಡೆಸಲಾಯಿತು ಹಾಗೂ ಶ್ರಮದಾನವನ್ನು ಕಾಲೇಜಿನ ಆವರಣದಲ್ಲಿ ನಡೆಸಲಾಯಿತು. ದಿನಾಂಕ 04.08.2018 ರಂದು ಶಿಬಿರಾರ್ಥಿಗಳಿಂದ ವಾರಾಂತ್ಯದ ದೈನಂದಿನ ಚಟುವಟಿಕೆಗಳು ಉದ್ಘಾಟನೆ ಮತ್ತು ಶ್ರಮದಾನವನ್ನು ಕಾರ್ಯಕ್ರಮದ ಶಿಬಿರಾಧಿಕಾರಿಗಳಾದ ಪ್ರೊ ಎಸ್.ಹೆಚ್.ಮರಿಯಯ್ಯ ಮತ್ತು ಪ್ರೊ ನೀಲಕಂಠರವರ ಸಮ್ಮುಖದಲ್ಲಿ ಹಾಗೂ ಕಾಲೇಜಿನ ಆಡಳಿತ ಸಿಬ್ಬಂದಿ ವರ್ಗದವರು ಮತ್ತು ಶಿಬಿರಾರ್ಥಿಗಳಿಂದ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. 01.09.2018 ರಂದು ರಾಷ್ಟ್ರೀಯ ಸೇವಾ ಯೋಜನೆಯ ಎರಡು ಘಟಕಗಳು ಶಿಬಿರಾಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಿಂದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಸ್ವಯಂ ಸೇವಕರ ಪಾತ್ರದ ಬಗ್ಗೆ ಉಪನ್ಯಾಸವನ್ನು



Scanned with CamScanner

ಹಮ್ಮಿಕೊಳ್ಳಲಾಯಿತು. 08.09.2018ರಂದು ರಾ.ಸೇ.ಯೋ. ಘಟಕದಿಂದ ಕಾರ್ಯಕ್ರಮಾಧಿಕಾರಿಗಳಾದ ಪ್ರೊ ಎಸ್.ಹೆಚ್. ಮರಿಯಯ್ಯ ಮತ್ತು ಪ್ರೊ ನೀಲಕಂಠರವರ ಸಮ್ಮುಖದಲ್ಲಿ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಆಚರಿಸಲಾಯಿತು. 15.09.2018 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನ ಹಾಗೂ ಸರ್.ಎಂ.ವಿಶ್ವೇಶ್ವರಯ್ಯವರವರ ಹುಟ್ಟುಹಬ್ಬವನ್ನು ರಾ.ಸೇ.ಯೋ. ಘಟಕದಿಂದ ಹಮ್ಮಿಕೊಳ್ಳಲಾಯಿತು. 24.9.2018 ರಂದು ರಾ.ಸೇ.ಯೋ. ಘಟಕದಿಂದ ಹಮ್ಮಿಕೊಳ್ಳಲಾಯಿತು. 24.9.2018 ರಂದು ರಾ.ಸೇ.ಯೋ. ದಿನಾಚರಣೆಯನ್ನು 50ನೇ ವರ್ಷದ ಅಂಗವಾಗಿ ಶಿಬಿರಾಧಿಕಾರಿಗಳು ಮತ್ತು ಶಿಬಿರಾರ್ಥಿಗಳಿಂದ ಆಚರಿಸಲಾಯಿತು. 29.9.2018ರಂದು ಆರೋಗ್ಯ ಪ್ರಥಮ ಚಿಕಿತ್ಸೆ ಬಗ್ಗೆ ಡಾ.ಮಾದೇಶ್‌ರವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಶಿಬಿರಾರ್ಥಿಗಳಿಗೆ ಹಮ್ಮಿಕೊಳ್ಳಲಾಯಿತು. 29.9.2018ರಂದು ರಾ.ಸೇ.ಯೋ.ಉದ್ದೇಶ, ಸಫಲತೆ ಮತ್ತು ಭವಿಷ್ಯದ ಸವಾಲುಗಳನ್ನು ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಗೋಷ್ಠಿಯನ್ನು 5ನೇ ರಾ.ಸೇ.ಯೋ.ಯ ಸುವರ್ಣ ಸಂಭ್ರಮಾಚರಣೆಯ ಅಂಗವಾಗಿ ಶಿಬಿರಾಧಿಕಾರಿಗಳು ಮತ್ತು ಶಿಬಿರಾರ್ಥಿಗಳಿಂದ ಆಚರಿಸಲಾಯಿತು. 29.9.2018 ರಂದು ಆರೋಗ್ಯ ಪ್ರಥಮ ಚಿಕಿತ್ಸೆ ಬಗ್ಗೆ ಡಾ.ಮಾದೇಶ್‌ರವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಶಿಬಿರಾರ್ಥಿಗಳಿಗೆ ಹಮ್ಮಿಕೊಳ್ಳಲಾಯಿತು. 29.9.2018 ರಂದು ರಾ.ಸೇ.ಯೋ. ಉದ್ದೇಶ, ಸಫಲತೆ ಮತ್ತು ಭವಿಷ್ಯದ ಸವಾಲುಗಳನ್ನು ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಗೋಷ್ಠಿಯನ್ನು 50ನೇ ರಾ.ಸೇ.ಯೋ.ಯ ಸುವರ್ಣ ಸಂಭ್ರಮಾಚರಣೆಯ ಅಂಗವಾಗಿ ಶ್ರೀ ಕೆ.ಪುಟ್ಟಸ್ವಾಮಿ, ಪ್ರಥಮ ದರ್ಜೆ ಕಾಲೇಜು ವಿದ್ಯಾವರ್ಧಕ ಸಂಘ (ರಿ)., ಮೈಸೂರು ವತಿಯಿಂದ ನಡೆಸಲಾಯಿತು. 2.10.2018 ರಂದು ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಗಳಿಂದ ಹಾಗೂ ಶಿಬಿರಾರ್ಥಿಗಳಿಂದ ಗಾಂಧಿಜಯಂತಿ ಮತ್ತು ಉಪನ್ಯಾಸವನ್ನು ಪಿ.ಇ.ಎಸ್.ಕಾಲೇಜು ಮಂಡ್ಯ ವತಿಯಿಂದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 13.10.2018ರಂದು ಶಿಬಿರಾಧಿಕಾರಿಗಳಾದ ಪ್ರೊ ಎಸ್.ಹೆಚ್.ಮರಿಯಯ್ಯ ಮತ್ತು ಪ್ರೊ ನೀಲಕಂಠ ಮತ್ತು ಸ್ವಯಂಸೇವಕರಿಂದ ಸ್ಲಂನಲ್ಲಿ ಶ್ರಮದಾನವನ್ನು ನಡೆಸಲಾಯಿತು. 16.10.2018ರಂದು 50ನೇ ರಾ.ಸೇ.ಯೋ.ಯ ಸುವರ್ಣ ಸಂಭ್ರಮ ಅಂಗವಾಗಿ ವಿಜಯ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಗಾಂಧಿವಿಚಾರವನ್ನು ಕುರಿತು ವಿಚಾರ ಸಂಕೀರ್ಣ ನಡೆಸಲಾಯಿತು. ಇಂತಹ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ಸ್ವಯಂಸೇವಕರು ಭಾಗವಹಿಸಿದರು.

ದಿನಾಂಕ 18.10.2018 ರಂದು ಆಯುಧಪೂಜೆ ಪರಿಕರಗಳಿಗೆ ಪೂಜೆಯನ್ನು ಶಿಬಿರಾಧಿಕಾರಿಗಳಿಂದ ನಡೆಸಲಾಯಿತು. 01.11.2018 ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಾಧಿಕಾರಿಗಳಾದ ಪ್ರೊ ಎಸ್.ಹೆಚ್.ಮರಿಯಯ್ಯ ಮತ್ತು ಪ್ರೊ ನೀಲಕಂಠರವರ ಸಮ್ಮುಖದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಾಡಗೀತೆ ಸ್ಪರ್ಧೆಯನ್ನು ಶಿಬಿರಾರ್ಥಿಗಳಿಗೆ ಹಮ್ಮಿಕೊಳ್ಳಲಾಯಿತು. 29.11.2018 ರಿಂದ 02.12.2018ರವರೆಗೆ ಹಾಸನ ಜಿಲ್ಲೆ ಅರಸೀಕೆರೆ ಕಸ್ತೂರಬಾ ಆಶ್ರಮದಲ್ಲಿ ಅಂತರಕಾಲೇಜು ನಾಯಕತ್ವದ ಶಿಬಿರ ನಡೆದ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ಶಿಬಿರಾರ್ಥಿಗಳಾದ (ಎನ್.ಎಸ್.ಎಸ್.) ನಾಗಮಣಿ ಎಂ.ಕೆ. ತೃತೀಯ ಬಿಬಿಎ, ಪೂಜಾ ಎ.ಜಿ. ದ್ವಿತೀಯ ಬಿ.ಕಾಂ., ಸಂಜಯ್, ದ್ವಿತೀಯ ಬಿಬಿಎ, ಮನೋಜ್, ದ್ವಿತೀಯ ಬಿ.ಎ. ಭಾಗವಹಿಸಿದರು. 01.12.2018 ರಂದು ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಏಡ್ಸ್ ಅರಿವು ಮೂಡಿಸುವ ಕಾರ್ಯಕ್ರಮವನ್ನು



Scanned with CamScanner

ಶಿಬಿರಾರ್ಥಿಗಳಿಗೆ ಹಮ್ಮಿಕೊಳ್ಳಲಾಯಿತು. 29.12.2018ರಂದು ಶಿಬಿರಾರ್ಥಿಗಳಿಗೆ ಮಾನವ ಹಕ್ಕುಗಳ ಬಗ್ಗೆ ವಿಶೇಷ ಉಪನ್ಯಾಸಕ ಮತ್ತು ಖ್ಯಾತ ವಕೀಲರಾದ ಬಿ.ಡಿ.ವಿಶ್ವನಾಥರವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 3.01.2019 ರಂದು ವಿಶೇಷ ವಾರ್ಷಿಕ ಶ್ರಮದಾನ ಶಿಬಿರದ ಬಗ್ಗೆ ಶಿಬಿರಾಧಿಕಾರಿಗಳು ಮತ್ತು ಹಿರಿಯ ಶಿಬಿರಾಥಿಗಳಿಂದ ಸಭೆ ನಡೆಸಲಾಯಿತು. 05.01.2019 ರಿಂದ 11.01.2019ರವರೆಗೆ ವಿಶೇಷ ವಾರ್ಷಿಕ ಶ್ರಮದಾನ ಶಿಬಿರವನ್ನು ಡಾ.ಸಿ.ಆರ್.ರಾಜು ಮತ್ತು ಶಿಬಿರಾಧಿಕಾರಿಗಳಾದ ಪ್ರೊ ಎಸ್.ಹೆಚ್.ಮರಿಯಯ್ಯ ಮತ್ತು ಪ್ರೊ ನೀಲಕಂಠ ಹಾಗೂ ಪ್ರೊ ಸುದರ್ಶನ್ ರವರು ಹಾಗೂ ಸ್ವಯಂಸೇವಕ ವಿದ್ಯಾರ್ಥಿಗಳು ವಿಶೇಷ ಶ್ರಮದಾನವನ್ನು ಮಾದರಹಳ್ಳಿ ಗ್ರಾಮದಲ್ಲಿ ನಡೆಸಲಾಯಿತು. 25.1.2019 ರಂದು District Youth parliament ಸ್ವಯಂಸೇವಕರನ್ನು ಕಳುಹಿಸಿ ಕೊಡಲಾಗಿತ್ತು. 30.01.2019 ರಂದು ಕರ್ನಾಟಕ ಸರ್ಕಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಂಡ್ಯ, ಆಯುಷ್ ಇಲಾಖೆ, ಎಸ್.ಸಿ.ಪಿ./ ಟಿ.ಎಸ್.ಪಿ. ಯೋಜನೆಯಡಿ ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ ಮತ್ತು ರೆಡ್‌ಕ್ರಾಸ್ ಘಟಕ ಮಂಡ್ಯ ಇವರ ಸಂಯೋಗದಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸ್ವಾಸ್ಥ್ಯ ರಕ್ಷಣಾ ಮತ್ತು ಔಷಧಿ ಸಸ್ಯಗಳ ಮಾಹಿತಿ ಕುರಿತು ಒಂದು ದಿನದ ತಾಲ್ಲೂಕು ಮಟ್ಟದ ಕಾರ್ಯಗಾರವನ್ನು ಪ್ರಾಂಶುಪಾಲರಾದ ಡಾ.ಸಿ.ಆರ್.ರಾಜುರವರ ನೇತೃತ್ವದಲ್ಲಿ ನಡೆಲಾಯಿತು. 01.02.2019 ರಂದು ಮಂಡ್ಯ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆ, ಜಿಲ್ಲಾಸ್ಪತ್ರೆ, ಮಂಡ್ಯ ವತಿಯಿಂದ ರಕ್ತದಾನ ಶಿಬಿರವನ್ನು ಯುವರೆಡ್‌ಕ್ರಾಸ್ ಮತ್ತು ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಮತ್ತು (ಎನ್.ಸಿ.ಸಿ) ವತಿಯಿಂದ ಪಿ.ಇ.ಎಸ್.ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯದಲ್ಲಿ ನಡೆಸಲಾಯಿತು.

ದಿನಾಂಕ 10.2.2018 ರಂದು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಾರ್ಥಿಗಳಿಗೆ ವ್ಯಕ್ತಿತ್ವ ವಿಕಸನದ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 17.02.2019 ರಿಂದ 19.2.2019 ರವರೆಗೆ ನೆಹರು ಯುವಕೇಂದ್ರ ವತಿಯಿಂದ ನಡೆದ ಯುವ ಮುಂದಾಳತ್ವ ಮತ್ತು ವ್ಯಕ್ತಿವಿಕಸನ ಎಂಬ ಕಾರ್ಯಾಗಾರದಲ್ಲಿ ನಮ್ಮ ಕಾಲೇಜಿನ 25 ಸ್ವಯಂಸೇವಕರನ್ನು ಕಳುಹಿಸಿ ಕೊಡಲಾಗಿತ್ತು. 27.02.2019 ರಿಂದ 05.03.2019 ರವರೆಗೆ ಬೆಳಗಾಂ ಕೆ.ಎಲ್.ಇ.ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕಿ ಕುಮಾರಿ ನಾಗಮಣಿ ಎನ್.ಕೆ. ಇವರು ಭಾಗವಹಿಸಿದ್ದರು. 09.3.2019 ರಿಂದ 15.3.2019 ರವರೆಗೆ ಮೈಸೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಮಂಡ್ಯ ಇವರ ವತಿಯಿಂದ ಜಿಲ್ಲಾ ಮಟ್ಟದ ಅಂತರಕಾಲೇಜು ವಾರ್ಷಿಕ ವಿಶೇಷ ಶಿಬಿರವನ್ನು ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು ಆನೆಕೆರೆ ಗ್ರಾಮ ಇಲ್ಲಿ ನಡೆದ ಕಾರ್ಯಕ್ರಮಕ್ಕೆ ನಮ್ಮ ಕಾಲೇಜಿನ ಶಿಬಿರಾರ್ಥಿಗಳು ಭಾಗವಹಿಸಿದ್ದರು. & ಉತ್ತಮ ಸ್ವಯಂ ಸೇವಕರು ಎಂಬ ಕೀರ್ತಿಗೆ ಪಾತ್ರರಾಗಿ ಬಹುಮಾನವನ್ನು ಪಡೆದು ಕೊಡಿರುತ್ತಾರೆ.

***



Scanned with CamScanner

# ಸಾಂಸ್ಕೃತಿಕ ಚಟುವಟಿಕೆಗಳ ವಾರ್ಷಿಕ ವರದಿ 2018-19

ಸಿದ್ದಲಿಂಗಪ್ಪ ಎಚ್.ಜಿ
ಸಂಚಾಲಕರು, ಸಾಂಸ್ಕೃತಿಕ ಸಮಿತಿ

ದಿನಾಂಕ: 30-7-2019 ರಂದು ಪ್ರಾಂಶುಪಾಲರಾದ ಡಾ.ರಾಮಲಿಂಗಯ್ಯನವರು ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕರಾಗಿ ಪ್ರೊ.ಹೆಚ್.ಜಿ.ಸಿದ್ದಲಿಂಗಪ್ಪನವರನ್ನು ನೇಮಿಸಲಾಯಿತು. ಸದಸ್ಯರುಗಳಾಗಿ ರೇಣುಕಯ್ಯ.ಕೆ.ಎಸ್., ಚಂದ್ರಶೇಖರ್.ಸಿ., ಡಾ.ಸವಿತ, ಡಾ.ಅಮೃತವರ್ಷಿಣಿ.ವಿ. ಶೃತಿ ಎಸ್. ಶಿವಕುಮಾರ್, ಎಂ.ಡೇವಿಡ್ ಶಾಂತರಾಜು, ಶ್ರೀ ಮರಿಯಯ್ಯ ಹಾಗೂ ಸುದರ್ಶನ ಬಿ.ಎನ್. ಇವರುಗಳನ್ನು ನೇಮಿಸಲಾಯಿತು.

2018-19ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಚಟುವಟಿಕೆಗಳ ವಿವರ-

1) ದಿನಾಂಕ-22-8-2018 ರಂದು ಪೋಷಕರ ಸಭೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಡೆಸಲಾಯಿತು. ಈ ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರು ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು. 2017-18ನೇ ಸಾಲಿನ ಪದವಿ ಪರೀಕ್ಷೆಯ ಅತ್ಯುನ್ನತ ಶ್ರೇಣಿಯಲ್ಲಿ ತೇಗರ್ಡೆಯಾದ 72 ವಿದ್ಯಾರ್ಥಿಗಳಿಗೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜನತಾ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಡಾ.ಹೆಚ್.ಡಿ.ಚೌಡಯ್ಯನವರು ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು.

2) ದಿನಾಂಕ: 10-8-2018ರಂದು ವಿದ್ಯಾರ್ಥಿಗಳಿಗೆ ಪ್ರತಿಭಾನ್ವೇಷಣೆ ಕಾರ್ಯಕ್ರಮ ಹಮ್ಮಿಕೊಂಡು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು.

3) ದಿನಾಂಕ: 28-08-2018 ರಂದು 2018-19ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಉದ್ಘಾಟನಾ ಸಮಾರಂಭವನ್ನು ನಡೆಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜನತಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಹೆಚ್.ಹೊನ್ನಪ್ಪನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಂಟಿ ಕಾರ್ಯದರ್ಶಿಗಳಾದ ಶ್ರೀಯುತ ಎಸ್.ಪಂಚಲಿಂಗುರವರು ಭಾಗವಹಿಸಿದ್ದರು. ಉದ್ಘಾಟನಾ ಭಾಷಣವನ್ನು ಶ್ರೀಶಂಕರ ದೇವನೂರು, ಸಂಸ್ಕೃತಿ ಚಿಂತಕರು ಮುಖ್ಯ ಇಂಜಿನಿಯರ್ ಕರ್ನಾಟಕ ವಿದ್ಯುತ್ ನಿಗಮ ಬೆಂಗಳೂರು ಇವರು ನೆರವೇರಿಸಿದರು.

4) ಸೆಪ್ಟೆಂಬರ್, 2018ರ 3, 4 ಮತ್ತು 5ನೇ ದಿನಾಂಕದಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ 12 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.



Scanned with CamScanner

5) ಸೆಪ್ಟೆಂಬರ್, 2018ರ 20ನೇ ದಿನಾಂಕದಂದು ಭಾರತೀ ನಗರದ, ಭಾರತೀ ಕಾಲೇಜಿನಲ್ಲಿ ನಡೆದ ಭಾರತೀ ಉತ್ಸಾವದಲ್ಲಿ 12 ವಿದ್ಯಾರ್ಥಿಗಳು ಏಕ ನೃತ್ಯ, ಜೋಡಿ ನೃತ್ಯ ಹಾಗೂ ಸಮೂಹ ನೃತ್ಯ, ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ.

6) ಸೆಪ್ಟೆಂಬರ್, 2018ರ 28ನೇ ದಿನಾಂಕದಂದು ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ನಡೆದ ಜಾನಪದ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

7) ದಿನಾಂಕ: 15–9–2018ರಂದು ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

8) ದಿನಾಂಕ: 25–09–2018ರಂದು ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಚ್.ಡಿ.ಚೌಡಯ್ಯರವರ ಜನ್ಮ ದಿನ ಪ್ರಯುಕ್ತ ಅವರಿಗೆ ಮಾಲಾರ್ಪಣೆ ಮಾಡಿ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು.

9) ದಿನಾಂಕ: 29–9–2018ರಂದು ನಮ್ಮ ಕಾಲೇಜಿನಲ್ಲಿ ಜನತಾ ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷರಾದ ಡಾ.ಹೆಚ್.ಡಿ.ಚೌಡಯ್ಯನವರ ಗೌರವಾರ್ಥ ಮೈಸೂರು ವಿಶ್ವವಿದ್ಯಾಲಯ ಮಟ್ಟದ ಅಂತರಕಾಲೇಜು ಚರ್ಚಾಸ್ಪರ್ದೆಯನ್ನು ನಡೆಸಲಾಯಿತು. ಸ್ಪರ್ಧೆಯಲ್ಲಿ ವಿವಿಧ ಜಿಲ್ಲೆಗಳಿಂದ ಸುಮಾರು 56 ವಿದ್ಯಾರ್ಥಿಗಳು ಭಾಗವಹಿಸಿದ್ದರು ವಿಜೇತರಿಗೆ ಡಾ.ಹೆಚ್.ಡಿ.ಚೌಡಯ್ಯರವರು ಬಹುಮಾನ ವಿತರಣೆ ಮಾಡಿದರು.

10) ಜನವರಿ, 2019ರ 5ನೇ ದಿನಾಂಕದಂದು ಬೆಂಗಳೂರಿನ ನ್ಯಾಷನಲ್ ಕಾಲೇಜು, ಬಸವನಗೂಡಿಯಲ್ಲಿ ನಡೆದ ರಾಜ್ಯಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಿ ತ್ರಿಜನ್ಯ.ಎಸ್.ಆರ್, ಪ್ರಥಮ ಬಿ.ಕಾಂ, ಪ್ರಥಮ ಬಹುಮಾನ, ವರ್ಷ.ಜೆ, ದ್ವಿತೀಯ ಬಿ.ಕಾಂ, ತೃತೀಯ ಬಹುಮಾನ ಪಡೆದು ಪಾರಿತೋಷಕವನ್ನು ಸಹ ನಮ್ಮ ಕಾಲೇಜಿನ ಮುಡಿಗೇರಿಸಿದ್ದಾರೆ.

11) ದಿನಾಂಕ: 1–12–2018 ರಂದು ಜಿಲ್ಲಾ ಪಂಚಾಯತ್ ಮಂಡ್ಯ ಇವರ ಸೂಚನೆಯಂತೆ ಮತದಾನದ ಬಗ್ಗೆ ಯುವ ಜನತೆಯಲ್ಲಿ ಅರಿವು ಮೂಡಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಯಿತು.

12) ಜನವರಿ, 2019ರ 11ನೇ ತಾರೀಖಿನಂದು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ನಡೆದ ಜಾನಪದ ಭಾವಗೀತೆ ಸ್ಪರ್ಧೆಗೆ 04 ವಿದ್ಯಾರ್ಥಿಗಳು ಭಾಗವಹಿಸಿ ಅದರಲ್ಲಿ ಚಂದನ, ದ್ವಿತೀಯ ಬಿ.ಕಾಂ, ಪ್ರಥಮ ಬಹುಮಾನ, ಸುರಭಿ, ಪ್ರಥಮ ಬಿ.ಕಾಂ, ದ್ವಿತೀಯ ಬಹುಮಾನವನ್ನು ಪಡೆದು ಪಾರಿತೋಷಕವನ್ನು ಸಹ ನಮ್ಮ ಕಾಲೇಜಿನ ಮುಡಿಗೇರಿಸಿದ್ದಾರೆ.



Scanned with CamScanner

13) ಜನವರಿ, 2019ರ 14ನೇ ತಾರೀಖಿನಂದು ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ ರವರು ಆಯೋಜಿಸಿದ್ದ "Quotes of Swami Vivekananda" ಸ್ಪರ್ಧೆಯಲ್ಲಿ 10 ವಿದ್ಯಾರ್ಥಿಗಳು ಭಾಗವಹಿಸಿ ರಾಜು.ಕೆ.ಎಸ್.ರವರು ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ.

14) ಜನವರಿ, 2019ರ 23ನೇ ತಾರೀಖಿನಂದು ಮೈಸೂರಿನ ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ "Techcom-2019" ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ 16 ವಿದ್ಯಾರ್ಥಿಗಳು ಭಾಗವಹಿಸಿ 05 ವಿದ್ಯಾರ್ಥಿಗಳು ಬಹುಮಾನವನ್ನು ಪಡೆದಿರುತ್ತಾರೆ. ಅದರಲ್ಲಿ ವಿನ್ಯಾಸ್.ಎಂ.ಎಲ್, ಪ್ರಥಮ ಬಿ.ಕಾಂ ರವರು "Plan your Money" ಎಂಬ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದಿರುತ್ತಾರೆ. ಜೊತೆಗೆ Ad show ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಯಶಸ್ವಿನಿ.ವೈ.ಎ, ರೇಷ್ಮ.ಎಂ.ಎಸ್, ದರ್ಶಿತ್.ಎಸ್.ಎಲ್ ಮತ್ತು ಕೀರ್ತನ.ಜಿ ಇವರುಗಳು ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ.

15) ಜನವರಿ, 2019ರ 25ನೇ ತಾರೀಖಿನಿಂದ ಮಂಡ್ಯದ ಸರ್ಕಾರಿ ಬಾಲಕರ ಕಾಲೇಜಿನಲ್ಲಿ ನೆಹರು ಯುವ ಕೇಂದ್ರದವರು ಆಯೋಜಿಸಿದ್ದ "District youth Parliament" ಸ್ಪರ್ಧೆಯಲ್ಲಿ ಇಬ್ಬರು ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಭಾಗವಹಿಸಿ ವರ್ಷ.ಜೆ, ದ್ವಿತೀಯ ಬಿ.ಕಾಂ. ರವರು ಪ್ರಥಮ ಬಹುಮಾನವನ್ನು ಪಡೆದಿರುತ್ತಾರೆ ನಂತರ ವರ್ಷದ ದೆಹಲಿಯಲ್ಲಿ 24-2-2019 ರಂದು ನಡೆದ ಪ್ರಧಾನ ಮಂತ್ರಿಯವರ ಸಂವಾದ ಕಾರ್ಯದಲ್ಲಿ ಭಾಗವಹಿಸಿದ್ದಾರೆ.

16) ಜನವರಿ, 2019 26ನೇ ತಾರೀಖಿನಿಂದ ಮಂಡ್ಯದ ಕನಕ ಭವನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾ ಬಳಗದವರು ಆಯೋಜಿಸಿದ್ದ ದೇಶಿ ಭಕ್ತಿಗೀತೆಗಳ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ 10 ವಿದ್ಯಾರ್ಥಿಗಳು ಭಾಗವಹಿಸಿದ್ದರು.

17) ಜನವರಿ, 2019ರ 30ನೇ ತಾರೀಖಿನಂದು ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮಂಡ್ಯ ತಾಲ್ಲೂಕು ಮಟ್ಟದ ಗಾಂಧಿ ವಿಚಾರ ಕುರಿತು ಲಿಖಿತ ರಸ ಪ್ರಶ್ನೆ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಿ ಶಿಲ್ಪಶ್ರೀ, ದ್ವಿತೀಯ ಬಿ.ಕಾಂ. ರವರು 5ನೇ ಬಹುಮಾನ ಹಾಗೂ ರಾಜು.ಕೆ.ಎಸ್, ದ್ವಿತೀಯ ಬಿ.ಕಾಂ. ರವರು ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ.



Scanned with CamScanner

18) ದಿನಾಂಕ: 29-01-2019ರಂದು ನೈತಿಕ ಶಿಕ್ಷಣ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಶ್ರೀ ಸುರೇಶ್‌ಗೌಡ ಕೋಲಾರ ಇವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

19) ದಿನಾಂಕ: 6-2-2019ರಂದು ದಿ.ಕೆ.ವಿ.ಶಂಕರಗೌಡರ ಸ್ಮರಣಾರ್ಥ ರಾಜ್ಯಮಟ್ಟದ ಜನಪದ ಗೀತೆ ಸ್ಪರ್ಧೆಯನ್ನು ನಡೆಸಲಾಯಿತು. ಈ ಸ್ಪರ್ಧೆಯಲ್ಲಿ ಸುಮಾರು 74 ವಿದ್ಯಾರ್ಥಿಗಳು ವಿವಿಧ ಜಿಲ್ಲೆಗಳಿಂದ ಆಗಮಿಸಿ ಭಾಗವಹಿಸಿದ್ದರು. ನಮ್ಮ ಕಾಲೇಜಿನ ದ್ವಿತೀಯ ಬಿ.ಕಾಂ.ವಿದ್ಯಾರ್ಥಿಯಾದ ಪೂಜಾ ಇವರು ಪ್ರಥಮ ಬಹುಮಾನ ಪಡೆಯುವುದರ ಮೂಲಕ ಪಾರಿತೋಷಕವನ್ನು ನಮ್ಮ ಕಾಲೇಜಿಗೆ ತಂದುಕೊಟ್ಟರು. ಬಹುಮಾನ ವಿತರಣೆಯನ್ನು ಸಂಸ್ಥೆಯ ಅಧ್ಯಕ್ಷರಾದ ಡಾ.ಹೆಚ್.ಡಿ.ಚೌಡಯ್ಯರವರು ವಿತರಿಸಿದರು.

20) ದಿನಾಂಕ: 26-02-2019 ಹಾಗೂ 27-02-2019ರಂದು ನಮ್ಮ ಕಾಲೇಜಿನಲ್ಲಿ ಪಿ.ಇ.ಎಸ್.ಉತ್ಸವ ಮತ್ತು ಸಾಂಪ್ರದಾಯಿಕ ದಿನಚರಣೆಯನ್ನು ಹಮ್ಮಿಕೊಳ್ಳಲಾಯಿತು. ಅಂದು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಯಿತು. ಎಲ್ಲಾ ವಿದ್ಯಾರ್ಥಿಗಳು ಸಾಂಸ್ಕೃತಿಕ ಉಡುಗೆ-ತೊಡುಗೆಗಳನ್ನು ಧರಿಸಿದ್ದರು.

21) ದಿನಾಂಕ: 11-3-2019ರಂದು 2018-19ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ನಡೆಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಡಾ.ಎಚ್.ಡಿ.ಚೌಡಯ್ಯರವರು ವಹಿಸಿದ್ದರು. ಮುಖ್ಯ ಅತಿಥಿಗಳ ಭಾಷಣವನ್ನು ಶ್ರೀ.ಡಿ.ಟಿ. ರಾಮನುಜ (ಪೋಕಸ್ ಅಕಾಡೆಮಿ ಮೈಸೂರು)ರವರು ಮಾಡಿದರು.





Scanned with CamScanner